ಕರ್ನಾಟಕ ಉಚ್ಚ ನ್ಯಾಯಾಲಯ

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ

ಹಾಗೂ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಜಿ.ಎಂ. ಪಾಟೀಲ್

ಜೆಎಂಎಫ್ ಆಟೋ ಅಮಿಟೆಡ್ ವಿರುದ್ಧ ವಿದೇಶಿ ವ್ಯಾಪಾರದ ಮಹಾನಿರ್ದೇಶಕರು, ಉದ್ಯೋಗ ಭವನ, ನವದೆಹಲಿ ಮತ್ತು ಇತರರು

ರಿಟ್ ಅಪೀಲುಸಂಖ್ಯೆ: 100127/2019, (ಜಿಎಂ-ಆರ್‌ಇಎಸ್) ದಿನಾಂಕ 4 ನೇ ಸೆಪ್ಟೆಂಬರ್, 2019.

ತೀರ್ಪು

ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ:

ಅರ್ಜಿದಾರರು,ದಿನಾಂಕ: 13.02.2019 ರ ಆದೇಶವನ್ನು ಪ್ರಶ್ನಿಸಿ ಈ ಆಂತರಿಕ ನ್ಯಾಯಾಲಯ ಅಪೀಲಿನಲ್ಲಿ ರಿಟ್ ಅರ್ಜಿಸಂಖ್ಯೆ: 107971/2015 (ಜಿಎಂ-ಆರ್‌ಇಎಸ್) ದಲ್ಲಿ ಮಾನ್ಯ ಏಕಪೀಠ ನ್ಯಾಯಾಧೀಶರ ಮುಂದೆ ಬಂದಿದ್ದಾರೆ.

2. ಅಂಗೀಕರಿಸಿರುವಂತೆ, ಇದರಲ್ಲಿನ ಅರ್ಜಿದಾರರು ಧಾರವಾಡದಲ್ಲಿನ ಬೇಲೂರು ಕೈಗಾರಿಕಾ ಪ್ರದೇಶದಲ್ಲಿ ತನ್ನ ನೋಂದಾಯಿತ ಕಚೇರಿಯನ್ನು ಹೊಂದಿರುವ ಒಂದು ನಿಯಮಿತ ಕಂಪನಿಯಾಗಿದೆ.ಅರ್ಜಿದಾರ ಕಂಪನಿಯು, ತಾನು ಕೈಗಾರಿಕಾ ಬಳಕೆಗಾಗಿ ಕಪ್ ಮತ್ತು ಕೋನ್ಗಳ ಉತ್ಪಾದನೆಯಲ್ಲಿ ತೊಡಗಿರುವ ಶೇಕಡಾ 100 ರಷ್ಟು ರಫ್ತು ಆಧರಿತ ಘಟಕವಾಗಿದೆಯೆಂದು ಹೇಳಿಕೊಂಡಿದೆ.ಇದಕ್ಕೆ ಸಂಬಂಧಿಸಿದಂತೆ, ಅದು ಒಂದನೆಯ ಪ್ರತ್ಯರ್ಜಿದಾರರಾದ ವಿದೇಶಿ ವ್ಯಾಪಾರದ ಮಹಾ ನಿರ್ದೇಶಕರು, ಉದ್ಯೋಗ ಭವನ, ಹೊಸದೆಹಲಿ ಇವರಿಂದ, 6 " -12 " ಇಂಚುಗಳ ಅಳತೆಯುಳ್ಳ ಕಪ್ಪುಗಳು ಮತ್ತು ಕೋನ್ಗಳ ಉತ್ಪಾದನೆಯ ಉದ್ದೇಶಕ್ಕಾಗಿ ಒಂದು ಅನುಮತಿ ಪತ್ರವನ್ನು ಪಡೆದುಕೊಂಡಿರುತ್ತದೆ.

3. ಅನುಬಂಧ-ಬಿ ಯಲ್ಲಿ ಹಾಜರುಪಡಿಸಲಾದ,ದಿನಾಂಕ: 8.10.2007 ರಂದು ತಮ್ಮ ಪರವಾಗಿ ನೀಡಲಾದ, ಅನುಮತಿ ಪತ್ರವು, ವಾಣಿಜ್ಯಾತ್ಮಕ ಉತ್ಪಾದನೆ ಪ್ರಾರಂಭವಾದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಜಾರಿಯಲ್ಲಿರುತ್ತದೆ ಎಂಬುದನ್ನು ತೋರಿಸುತ್ತದೆ ಮತ್ತು ಅನುಮತಿ ನೀಡಲಾಗಿರುವ ಉತ್ಪನ್ನವ ವ್ಯವಹಾರಿಕ ಉತ್ಪಾದನೆಯ ಉದ್ದೇಶಕ್ಕಾಗಿ, ಅನುಮತಿ ಪತ್ರ ನೀಡಲಾದ ದಿನಾಂಕದಿಂದ ಮೂರು ವರ್ಷಗಳೊಳಗೆ ಯಾವ ಉತ್ಪನ್ನಗಳ ವಾಣಿಜ್ಯಾತ್ಮಕ ಉತ್ಪಾದನೆಗಾಗಿ ಅನುಮತಿ ನೀಡಲಾಯಿತೋ ಅಂಥ ಉತ್ಪನ್ನಗಳ ಉತ್ಪಾದನೆಗಾಗಿ ಯೋಜನೆಯನ್ನು ಅನುಷ್ಠಾನಗೊಳಿಸಬೇಕು ಎಂಬ ಷರತ್ತನ್ನು ಹಾಕಲಾಗಿತ್ತು.

4. ಪ್ರಸಕ್ತ ಪ್ರಕರಣದಲ್ಲಿ,ದಿನಾಂಕ: 8.10.2007 ರಂದು ನೀಡಲಾದ ಅನುಮತಿ ಪತ್ರದ ಪ್ರಕಾರದಿನಾಂಕ: 25.4.2012 ರಂದು ಸಹ ಅಪೀಲುದಾರ ಕಂಪನಿಯು ವಾಣಿಜ್ಯಾತ್ಮಕ ಉತ್ಪಾದನೆಯನ್ನು ಪ್ರಾರಂಭಿಸಿದ್ದಿಲ್ಲ ಎಂದು ತೋರುತ್ತದೆ.ಆದುದರಿಂದ, ಹಿಂದೆ ಹೇಳಿದ ಅನುಮತಿ ಪತ್ರವನ್ನು ಕಾರ್ಯಗತಗೊಳಿಸದೆ ಉಲ್ಲಂಘಿಸಿದ್ದಕ್ಕಾಗಿ ವಿದೇಶಿ ವ್ಯಾಪಾರ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1992 ರ 14 (ಬಿ) ಮತ್ತು 11 ನೇ ಪ್ರಕರಣ ಹಾಗೂ ವಿದೇಶಿ ವ್ಯಾಪಾರ (ನಿಯಂತ್ರಣ) ನಿಯಮಗಳು, 1993 ರ 17 ನೇ ನಿಯಮದ

ಅಡಿಯಲ್ಲಿದಿನಾಂಕ: 25.4.2012 ರಂದು ಅಪೀಲುದಾರನಿಗೆ ಕಾರಣ ಕೇಳುವ ನೋಟೀಸ್ (ಷೋಕಾಸ್ ನೋಟಿಸ್) ನ್ನು ಹೊರಡಿಸಲಾಯಿತು.ಇದರಲ್ಲಿದಿನಾಂಕ: 6.7.2012 ರಂದು, ಅಪೀಲುದಾರರು ಒಂದು ಉತ್ತರವನ್ನು ನೀಡಿದಾಗ್ಯೂ, ಉತ್ತರದಲ್ಲಿನ ಅಂಶಗಳುದಿನಾಂಕ: 8.10.2007 ರಂದು ನೀಡಲಾದ ಅನುಮತಿ ಪತ್ರಕ್ಕೆ ಅನುಗುಣವಾಗಿ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಆಗಿರುವ ಅತಿಯಾದ ವಿಳಂಬಕ್ಕೆ ಸಂಬಂಧಿಸಿದಂತೆ ತೃಪ್ತಿದಾಯಕವಾಗಿರಲಿಲ್ಲ.

5. ಈ ಹಿನ್ನೆಲೆಯಲ್ಲಿ, ತಮ್ಮ ಗ್ರಾಹಕರ ಮೂಲಕ ತಮ್ಮ ಮೂಲತತ್ವ ಟಿಮ್ಸ್ ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಪ್ರೈವೆಟ್ ಲಿಮಿಟೆಡ್ನ ಇದರಲ್ಲಿನ ಅಪೀಲುದಾರನು ಮಾಡಿದ ಪೂರೈಕೆಯು ಭಾವಿತ ರಫ್ತು ಆಗುವುದಿಲ್ಲ ಮತ್ತು ಅವರ ಪರವಾಗಿದಿನಾಂಕ: 8.10.2007 ರಂದು ನೀಡಲಾದ ಅನುಮತಿ ಪತ್ರದ ಷರತ್ತುಗಳನ್ನು ಅವರು ಈಡೇರಿಸಿರುವುದಿಲ್ಲ ಎಂದು ಘೋಷಿಸಿ ಮೊದಲನೆಯ ಪತ್ಯರ್ಜಿದಾರನುದಿನಾಂಕ: 08.01.2013 ರಂದು ಒಂದು ಆದೇಶವನ್ನು ಜಾರಿಗೊಳಿಸಲು ಮುಂದಾದರು.ತದನುಸಾರವಾಗಿ, ಈ ತಕ್ಷಣದಿಂದ ಜಾರಿಗೆ ಬರುವಂತೆ ಅದನ್ನು ರದ್ದುಗೊಳಿಸಲಾಯಿತು.ಹಾಗೆ ಮಾಡುವಾಗ ಅನುಮತಿ ಪತ್ರದ ಷರತ್ತುಗಳನ್ನು ಈಡೇರಿಸದಿದ್ದಕ್ಕಾಗಿ 5,00,000/- ರೂ.ಗಳ ದಂಡವನ್ನು ಹಾಗೂ ವಿದೇಶಿ ವ್ಯಾಪಾರ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1992 ರ 11 ( 2) ನೇ ಪ್ರಕರಣದಡಿಯಲ್ಲಿ ಇದರಲ್ಲಿನ ಅಪೀಲುದಾರರು ಎಪಿಆರ್ ಅನ್ನು ಸಲ್ಲಿಸದಿರುವುದಕ್ಕಾಗಿ 5,000/ ರೂ.ಗಳ ದಂಡ ವಿಧಿಸಲಾಯಿತು.

6. 2 ನೇ ಪ್ರತ್ಯರ್ಜಿದಾರರಾದ ಅಭಿವೃದ್ಧಿ ಆಯುಕ್ತರ ಸದರಿ ಆದೇಶವು, ಎಫ್.ನಂ .1/92/171/23/ಎಎಂ - 16/ಪಿಸಿ-VI/100 ಇದರಲ್ಲಿ ಮೊದಲನೆಯ ಪ್ರತ್ಯರ್ಜಿದಾರರಾದ ವಿದೇಶಿ ವ್ಯಾಪಾರದ ಮಹಾನಿದೇಶಕರು, ಭಾರತ ಸರ್ಕಾರ, ವಾಣಿಜ್ಯ ಮತ್ತು ಕೈಗಾರಿಕೆಗಳ ಸಚಿವಾಲಯ ಇವರ ಮುಂದಿರುವ ಆಕ್ಷೇಪಣೆಯ ವಿಷಯವಾಗಿತ್ತು.ಅಪೀಲುದಾರರ ಪರ ನೀಡಲಾದ ಅನುಮತಿ ಪತ್ರದ ರದ್ದತಿಯ ಆದೇಶವನ್ನು ದೃಢಪಡಿಸಿಕೊಳ್ಳುವುದರಲ್ಲಿದಿನಾಂಕ: 15.6.2015 ರ ಆದೇಶದ ಮೂಲಕ ವಜಾ ಮಾಡಲಾಯಿತು ಮತ್ತು ಮೊದಲನೆಯ ಪ್ರತ್ಯರ್ಜಿದಾರರ ಸದರಿ ಆದೇಶವು ರಿಟ್ ಅರ್ಜಿಸಂಖ್ಯೆ: 107971/2015 ರಲ್ಲಿ ಈ ನ್ಯಾಯಾಲಯದ ಮಾನ್ಯ ಏಕಸದಸ್ಯ ಪೀಠದ ಮುಂದೆ ಆಕ್ಷೇಪಣೆಯ ವಿಷಯವಾಗಿತ್ತು.ದಾಖಲೆಯಲ್ಲಿ ಲಭ್ಯವಿರುವ ಸಾಕ್ಷ್ಯಗಳ ಮೌಲ್ಯ ನಿರ್ಣಯದ ಆಧಾರದ ಮೇಲೆ, ಏಕ-ಸದಸ್ಯ ಪೀಠದ ಮಾನ್ಯ ನ್ಯಾಯಾಧೀಶರು, ತಮ್ಮ ಮುಂದೆ ಅರ್ಜಿದಾರರಾಗಿರುವ ಇದರಲ್ಲಿನ ಅಪೀಲುದಾರರು, ಅಪೀಲುದಾರನ ಘಟಕವನ್ನು ರಫ್ತು ಆಧಾರಿತ ಘಟಕವೆಂದು ಪರಿಗಣಿಸುವಲ್ಲಿ, ಅನುಮತಿ ಪತ್ರದ ಅಡಿಯಲ್ಲಿ ಅದರ ಮೇಲೆ ವಿಧಿಸಲಾಗಿರುವ ಯಾವುದೇ ಹೊಣೆಗಳನ್ನು ಪಾಲಿಸಲು ವಿಫಲರಾಗಿದ್ದಾರೆಂದು ದೃಢವಾಗಿ ಅಭಿಪ್ರಾಯಪಟ್ಟಿದ್ದಾರೆ.

7. ಏಕೆಂದರೆ, ಇದು ಅನುಮತಿ ಪತ್ರದ ಪ್ಯಾರಾ 2 ರ ಖಂಡ(vi) ರ ಅಡಿಯಲ್ಲಿ ವಿಧಿಸಲಾದ ಷರತ್ತುಗಳಿಗೆ ಒಳಪಟ್ಟಿರುತ್ತದೆ.ರಿಟ್ ಅರ್ಜಿಯ ಅನುಬಂಧ-ಡಿ ಯ ಮೇರೆಗೆ ಮೂಲ ಪ್ರಾಧಿಕಾರ ಅಥವಾ ಅನುಬಂಧ- ಎ ಮೇರೆಗೆ ಅಪೀಲು ಪ್ರಾಧಿಕಾರವು ನೀಡಿದ ಕಾರಣಗಳಲ್ಲಿ ಯಾವುದೇ ದೋಷಗಳು ಅಥವಾ ವಿಕೃತಿಗಳಿಲ್ಲವೆಂದು ಮಾನ್ಯ ಏಕಪೀಠ ನ್ಯಾಯಾಧೀಶರ ಪರಿಗಣಿತ ಅಭಿಪ್ರಾಯವಾಗಿತ್ತು.ಅದನ್ನು ದೃಢೀಕರಿಸಿರುವ ಮೂಲ ಪ್ರಾಧಿಕಾರ ಅಥವಾ ಅಪೀಲು ಪ್ರಾಧಿಕಾರಗಳು ಸಲ್ಲಿಸಿದ ಸತ್ಯದ ಶೋಧನೆಗೆ ವ್ಯತಿರಿಕ್ತವಾಗಿ ನಿರ್ಣಯ ನೀಡಲು ಮಾನ್ಯ ಏಕಪೀಠ ನ್ಯಾಯಾಧೀಶರ ಮುಂದೆ ಯಾವುದೇ ಸಾಕ್ಷ್ಯವನ್ನು ಹಾಜರುಪಡಿಸಲೂ ಇಲ್ಲ ಅಥವಾ ಪ್ರದರ್ಶಿಸಲೂ ಇಲ್ಲ ಎಂದು ಮಾನ್ಯ ಏಕಪೀಠ ನ್ಯಾಯಾಧೀಶರು ಅಭಿಪ್ರಾಯಪಟ್ಟರು.

8. ವಿಷಯದ ಆ ದೃಷ್ಟಿಕೋನದಲ್ಲಿ, ಮಾನ್ಯ ಏಕಪೀಠ ನ್ಯಾಯಾಧೀಶರ ಆದೇಶಕ್ಕೆ ಹಸ್ತಕ್ಷೇಪ ಮಾಡಲು ಯಾವುದೇ ಆಧಾರಗಳಿಲ್ಲ ಎಂಬುದನ್ನು ಈ ನ್ಯಾಯಾಲಯವು ಕಂಡುಕೊಂಡಿದೆ.ದಿನಾಂಕ: 8.10.2007 ರಂದು ಅರ್ಜಿದಾರರ ಪರ ನೀಡಲಾದ ಅನುಮತಿ ಪತ್ರವನ್ನು ಹಿಂತೆಗೆದುಕೊಳ್ಳುವುದನ್ನು ನಿರ್ಧರಿಸುವಲ್ಲಿ ಎರಡನೆಯ ಪ್ರತ್ಯರ್ಜಿದಾರರಾದ ಮೂಲ ಪ್ರಾಧಿಕಾರ ಮತ್ತು ಮೊದಲ ಪ್ರತ್ಯರ್ಜಿದಾರ ಅಪೀಲು ಪ್ರಾಧಿಕಾರವು ಸಲ್ಲಿಸಿದ ಸಮವರ್ತಿ ನಿರ್ಣಯವನ್ನು ದೃಢಪಡಿಸಿದ್ದು, ಇದು ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶಗಳ ಹಿನ್ನೆಲೆಯಲ್ಲಿ ನ್ಯಾಯಸಮ್ಮತ ಮತ್ತು ಸಮುಚಿತವೆಂದು ತೋರುತ್ತದೆ.

ತದನುಸಾರವಾಗಿ, ಈ ಆಂತರಿಕ ನ್ಯಾಯಾಲಯದ ಅಪೀಲನ್ನು ಅದಕ್ಕೆ ಹಸ್ತಕ್ಷೇಪ ಮಾಡುವುದಕ್ಕೆ ವಸ್ತು-ವಿಷಯದ ಕೊರತೆ ಇದೆ ಎಂಬುದಾಗಿ ಭಾವಿಸಿ ವಜಾ ಮಾಡಲಾಗಿದೆ.